

ಅದು ಮುಂದೆ ಎಲ್ಲಾ ಸರ್ಕಾರಗಳನ್ನು ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳುತ್ತದೆ. ನೆರೆಯ ದೇಶಗಳ ಪರಿಸ್ಥಿತಿ ನಮ್ಮ ಕಣ್ಣಮುಂದಿದೆ. ಯುವಶಕ್ತಿ, ಯುವಶಕ್ತಿ ಎನ್ನುತ್ತಾ ಅವರು ಪ್ರಧಾನಿಯಾಗಿಸಿದ್ದು ಅತ್ಯಂತ ವಯಸ್ಸಾಗಿದ್ದ ಮೊರಾರ್ಜಿ ದೇಸಾಯಿ ಅವರನ್ನು. ಹಣಕಾಸು ಸಚಿವರಾದದ್ದು ಸ್ವತಂತ್ರ ಅಭ್ಯರ್ಥಿಯಾಗಿ ಗೆದ್ದುಬಂದಿದ್ದ ಎಚ್.ಎಂ. ಪಟೇಲ್. ಇದೆಲ್ಲ ಕಾರಣದಿಂದ ನಾನು ಅವರಿಂದ ಅಂತರ ಕಾಯ್ದುಕೊಂಡೆ. ಈಗ ನಮ್ಮೆದುರು ಕೇವಲ ಮನುಷ್ಯರ ಸಮಸ್ಯೆ ಅಷ್ಟೇ ಅಲ್ಲ, ಇಡೀ ಬ್ರಹ್ಮಾಂಡವನ್ನು ಉಳಿಸಿಕೊಳ್ಳುವ ದೊಡ್ಡ ಸವಾಲಿದೆ. ನಮ್ಮ ಭೂಮಿಯನ್ನು ಉಳಿಸಿಕೊಳ್ಳೋಣ, ನೀರು ಗಾಳಿಯನ್ನು ಉಳಿಸಿಕೊಳ್ಳೋಣ, ಕಾಡು ಪರ್ವತಗಳನ್ನು ಉಳಿಸಿಕೊಳ್ಳೋಣ. ಬಂಡವಾಳಶಾಹಿಗಳನ್ನು ಕಟ್ಟಿಹಾಕದೆ ಬೇರೆ ದಾರಿಯಿಲ್ಲ.

◆ **ನೀವು ಕಾರ್ಲ್‌ಮಾರ್ಕ್ಸ್ ಅವರನ್ನು ಭೌತಿಕವಾದಿ ಕವಿ ಎಂದು ಕರೆದಿರುವಿರಿ.**

ನಿಜ. ಅವರು ಕವಿತೆಗಳನ್ನೂ ಬರೆದಿದ್ದಾರೆ. ಅದರಲ್ಲೂ ಪ್ರೇಮ ಕವಿತೆಗಳನ್ನೇ ಹೆಚ್ಚು ಬರೆದಿರುವರು. ಅವರು ಅಷ್ಟು ಒಳ್ಳೆಯ ಕವಿಯಲ್ಲ. ಇದನ್ನೂ ನಾನು ಹೇಳಬೇಕು. ಪ್ರತಿಯೊಬ್ಬ ಶ್ರೇಷ್ಠ ದಾರ್ಶನಿಕ ಒಳ್ಳೆಯ ಕವಿಯೂ ಆಗಿರಬೇಕೆಂದೇನಿಲ್ಲ. ಹಾಗಾಗಿದ್ದರೆ ಅಯ್ಯೋ ಇನ್ನೊಂದು ಚಮತ್ಕಾರವೇ ಆಗಿಬಿಡುತ್ತಿತ್ತು. ಕಾರ್ಲ್‌ಮಾರ್ಕ್ಸ್ ಅವರಲ್ಲಿ ಒಂದು ಅದ್ಭುತವಾದ ಸೌಂದರ್ಯದ ದೃಷ್ಟಿಯಿತ್ತು. ಕೊನೆಗೂ ಅವರ ದೃಷ್ಟಿ ಇದ್ದದ್ದು ಎಲ್ಲಾ ಅಸಮಾನತೆಗಳನ್ನು ಅಳಿಸಿಹಾಕಿ ಈ ಸಮಾಜವನ್ನು ಸುಂದರಗೊಳಿಸುವುದು. ಸೌಂದರ್ಯ ಮಾತ್ರ ಈ ಭೂಮಿಯನ್ನು ವಾಸಯೋಗ್ಯ ಮಾಡುವುದು. ಇದನ್ನು ಅವರು ಆಳದಲ್ಲಿ ನಂಬಿದ್ದರು.

◆ **ಕಾವ್ಯದಲ್ಲಿ ಅಮೂರ್ತತೆ, ಅನುಭಾವಿಕತೆ ಕುರಿತ ಚರ್ಚೆ ಕೂಡ ಇದೆ. ಹಿಂದಿ ಕಾವ್ಯ ಕೂಡ ಇದಕ್ಕೆ ಹೊರತಲ್ಲ. ಕಾವ್ಯದ ಇಂಥ ಸ್ವರೂಪ ಕುರಿತು ನಿಮ್ಮ ತಿಳಿವಳಿಕೆ ಯಾವ ಬಗೆಯದ್ದು?**

ಅಮೂರ್ತತೆ ಎನ್ನುವುದು ಭಾಷೆಯ ಒಂದು ಗುಣ. ಡೇವಿಡ್ ಕ್ರಿಸ್ಟಲ್ ಅವರ ಒಂದು ಕೃತಿಯಿದೆ 'ಲಿಂಗ್ವಿಸ್ಟಿಕ್ಸ್' ಅಂತ. ಅತ್ಯಂತ ಮಹತ್ವದ ಕೃತಿಯಿದು. ಈಗ ನೀವು ಯಾವುದೇ ಒಂದು ಪದ ಆಯ್ಕೆ ಮಾಡಿಕೊಳ್ಳಿ. ಉದಾಹರಣೆಗೆ, ಆಕಳು. ಇದು ಬೆಳೆಯುತ್ತ ಹೋಗುತ್ತದೆ. ಕಪ್ಪು ಆಕಳು, ಬಿಳಿ ಆಕಳು, ಸಣ್ಣ ಆಕಳು, ದೊಡ್ಡ ಆಕಳು, ಕೊಂಬಿರುವ ಆಕಳು, ಕೊಂಬಿಲ್ಲದ ಆಕಳು, ಕುಂಟುವ ಆಕಳು, ಕುಣಿವ ಆಕಳು, ಕರ್ನಾಟಕದ ಆಕಳು, ಬಿಹಾರದ ಆಕಳು, ಇತ್ಯಾದಿ. ಇವೆಲ್ಲಾ ಪದಗಳು ಹುಟ್ಟಲು ಕಾರಣ ಆಕಳು ಎಂಬ ಮೂಲ ಪದ. ಇದೇ ಅಮೂರ್ತ ಪದ. ಇದು ಅನೇಕ ಮೂರ್ತ ಪದಗಳನ್ನು ಹುಟ್ಟಿಸುತ್ತದೆ. ಕಾವ್ಯ